## ಕರ್ನಾಟಕ ವಿಧಾನ ಪರಿಷತ್ತು

(2)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 906 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎನ್., (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಅ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಶಿರಾಡೋಣದಿಂದ ಲಿಂಗಸುಗೂರು ರವರೆಗೆ ಇರುವ ರಾಜ್ಯ ಹೆದ್ದಾರಿ 41 ಅನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೊಳಿಸಲಾಗಿದೆಯೇ; ಸದರಿ ಹೆದ್ದಾರಿಯನ್ನು ಮೇಲ್ದರ್ಜೆಗೆ ಏರಿಸಿದಲ್ಲಿ ಪ್ರಯಾಣದ ಅವಧಿ ಹಾಗೂ ದೂರ ಕಡಿತವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಶಿರಾಡೋಣದಿಂದ ಲಿಂಗಸುಗೂರು ರವರೆಗೆ ಇರುವ ರಾಜ್ಯ ಹೆದ್ದಾರಿ-41 ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು 2016 ರಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ತಾತ್ವಿಕ ಅನುಮೋದನೆ ನೀಡಿದ್ದು, ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು M/s Satra infrastructure Management Service Pvt. ಇವರನ್ನು ಸಮಾಲೋಚಕರನ್ನಾಗಿ ನೇಮಿಸಲಾಗಿತ್ತು. ದಿನಾಂಕ: 28.07.2020ರ ಹೆದ್ದಾರಿ ಸಚಿವಾಲಯದ ಪತ್ರದಲ್ಲಿ ಮೇಲ್ದರ್ಜೆಗೇರಿಸುವ ಕಾರ್ಯಸಾಧ್ಯತಾ ಅಧ್ಯಯನಗಳ ಸಲಹಾ ಸೇವೆಗಳನ್ನು Foreclosure ಮಾಡುವಂತೆ ಸೂಚಿಸಿದ್ದು, ಅದರನ್ವಯ ಕ್ರಮ ವಹಿಸಲಾಗಿರುತ್ತದೆ. |
| ಆ) | ಸದರಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಿದ್ದರೆ, ಪ್ರಸ್ತುತ ಇದು ಯಾವ ಹಂತದಲ್ಲಿದೆ; ಇದನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿಗಣಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಕೈಗೊಂಡಿರುವ ಕ್ರಮಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | |
| ಇ) | ವಿಜಯಪುರ ಜಿಲ್ಲೆಯಿಂದ ಈವರೆಗೆ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೊಳಿಸಲಾಗಿದೆ; ಈ ಪಟ್ಟಿಯಲ್ಲಿ ಇನ್ನೂ ಯಾವ ಯಾವ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿಗಣಿಸಲು ಶಿಫಾರಸ್ಸು ಮಾಡಲಾಗಿದೆ; ಈ ಸಂಬಂಧ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳು ಯಾವುವು? (ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೊಂಡ ಮತ್ತು ಮೇಲ್ದರ್ಜೆಗೆ ಅನುಮೋದನೆ ಕೋರಿ ಸಲ್ಲಿಸಲಾದ ಪ್ರಸ್ತಾವನೆಗಳ ವಿವರಗಳನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ.<br><br>ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ದಿನಾಂಕ: 14-07-2025ರ ಪತ್ರದಲ್ಲಿ ಯಾವುದೇ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. |

ಸಂಖ್ಯೆ: ಲೋಇ 167 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

HQ 906 ಅನುಬಂಧ-01

(1)

ವಿಜಯಪುರ ಜಿಲ್ಲೆಯಲ್ಲಿನ ಈ ಕೆಳಕಂಡ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

| ಕ್ರ ಸಂ | ರಾಜ್ಯ ಹೆದ್ದಾರಿ | ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೊಂಡ ರಸ್ತೆಗಳು | |
|---|---|---|---|
| | | ಸಂಖ್ಯೆ | ಉದ್ದ ಕಿ.ಮೀ. ಗಳಲ್ಲಿ |
| 1 | ವಿಜಯಪುರ-ಸಂಕೇಶ್ವರ ಎಸ್.ಹೆಚ್-12 | 548ಬಿ | 33.50 |
| 2 | ಮಹಾರಾಷ್ಟ್ರ ಗಡಿಯಿಂದ ವಿಜಯಪುರ (ಎಂಡಿಆರ್) | 561ಎ | 11.627 |
| 3 | ಮಹಾರಾಷ್ಟ್ರ ಗಡಿಯಿಂದ ತಿಕೋಟಾ ಎಸ್.ಹೆಚ್-43 | 166ಇ | 23.31 |
| 4 | ಮಹಾರಾಷ್ಟ್ರ ಗಡಿಯಿಂದ ಇಂಡಿ-ವಿಜಯಪುರ ಎಸ್.ಹೆಚ್-34 & 48. | 548ಬಿ | 78.31 |

ಈ ಕೆಳಕಂಡ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

| ಕ್ರ ಸಂ | ರಾಜ್ಯ ಹೆದ್ದಾರಿ | ಉದ್ದ ಕಿ.ಮೀ. | ಷರಾ |
|---|---|---|---|
| 1 | ಎಸ್.ಹೆಚ್-18, 55 ಮತ್ತು 124 | 82.20 | ಗುರ್ಲಾಪೂರ-ಮುಧೋಳ-ಬೀಳಗಿ ಎನ್.ಹೆಚ್ ಎಂದು 2017 ರಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು ಅಂತಿಮ ಅಧಿಸೂಚನೆಗಾಗಿ ಕೇಂದ್ರ ಕಛೇರಿ ಪತ್ರ ಸಂಖ್ಯೆ:2282 ದಿನಾಂಕ:14.10.2022 ಭೂ-ಸಾರಿಗೆ ಮಂತ್ರಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 2 | ಎಸ್.ಹೆಚ್-41 ಮತ್ತು-34 | 215.00 | ಇಂಡಿ-ಝಳಕಿ-ಚಡಚಣ-ಶಿರಾಡೋಣ ಮಹಾರಾಷ್ಟ್ರ ಗಡಿ ಮತ್ತು ಲಿಂಗಸಗೂರು-ರೋಡಲಬಂಡಾ-ನಾರಾಯಣಪೂರ-ನಾಲತ್ತವಾಡ-ಮುದ್ದೇಬಿಹಾಳ-ಹೂವಿನಹಿಪ್ಪರಗಿ-ದೇವರಹಿಪ್ಪರಗಿ-ತಾಂಬಾ ಎನ್.ಹೆಚ್ ಎಂದು 2017 ರಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು ಅಂತಿಮ ಅಧಿಸೂಚನೆಗಾಗಿ ಕೇಂದ್ರ ಕಛೇರಿ ಪತ್ರ ಸಂಖ್ಯೆ:1990 ದಿನಾಂಕ:12.11.2021 ರಂದು ಪ್ರಾದೇಶಿಕ ಕಛೇರಿ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 3 | ಎಸ್.ಹೆಚ್-61 | 110.00 | ಮನಗೂಳಿ-ಬಿಜ್ಜಾಳ ಎನ್.ಹೆಚ್ ಎಂದು ಮೇಲ್ದರ್ಜೆಗೇರಿಸಲು ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ:381(ಇ) ದಿನಾಂಕ:23.01.2023 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಅನುಮೋದನೆ ನಿರೀಕ್ಷಿಸಿದೆ. |
| 4 | ಅಫಜಲ್‌ಪೂರ-ಆಲಮೇಲ-ಇಂಡಿ ರಾಜ್ಯ ಹೆದ್ದಾರಿ. | 42.00 | ಅಫಜಲ್‌ಪೂರ-ಆಲಮೇಲ-ಇಂಡಿ ಎನ್.ಹೆಚ್ ಎಂದು 2017 ರಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು ಅಂತಿಮ ಅಧಿಸೂಚನೆಗಾಗಿ ನೀತಿ ಆಯೋಗದಲ್ಲಿರುತ್ತದೆ. |
| 5 | ವಿಜಯಪುರ-ಯತ್ನಾಳ ರಸ್ತೆ | 47.00 | ವಿಜಯಪುರ-ಯತ್ನಾಳ ಎನ್.ಹೆಚ್ ಎಂದು 2017 ರಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು ಅಂತಿಮ ಅಧಿಸೂಚನೆಗಾಗಿ ನೀತಿ ಆಯೋಗದಲ್ಲಿರುತ್ತದೆ. |